# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ, ನ.ರಾ.ಪುರ.

ಸಿಸಿ ನಂ **89/2025**

ಸಿ ಡಬ್ಲ್ಯೂಃ– **5**/ಪಿ ಡಬ್ಲ್ಯೂ ಃ-**7**

ಸಾಕ್ಷಿದಾರರ ಹೆಸರು ಃ ವಿಪಿನ್
ತಂದೆಯ ಹೆಸರು ಃ ಕುಂಜು
ವಯಸ್ಸು ಃ **37** ವರ್ಷ
ಉದ್ಯೋಗ ಃ ವ್ಯವಸಾಯ
ವಾಸಸ್ಥಳ ಃ ಮುತ್ತಿನಕೊಪ್ಪ

ದಿನಾಂಕಃ **09-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

**1)** ಚಾಸಾ-1 ಮತ್ತು ಚಾಸಾ-4 ರವರ ಪರಿಚಯ ಇರುತ್ತದೆ. ಸಾಕ್ಷಿಗೆ ನಿಪಿ-2 ಮಹಜರ ನ್ನು ತೋರಿಸಲಾಗಿ ಸಾಕ್ಷಿಯು ನಿಪಿ-2 ರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಸದರಿಯವರ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-2 ಅನ್ನು ಯಾವ ಕಾರಣಕ್ಕಾಗಿ ಬರೆದಿರುತ್ತಾರೆ ಗೊತ್ತಿರುವುದಿಲ್ಲ. ಸಾಕ್ಷಿಗೆ ತಮ್ಮ ಭಾವಚಿತ್ರ ಇರುವ 2 ಫೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋವನ್ನು ಒಪ್ಪಿಕೊಂಡಿದ್ದು ಅವುಗಳನ್ನು ಈಗಾಗಲೇ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಗಿರುತ್ತದೆ. ನಿಪಿ-3 ಮತ್ತು ನಿಪಿ-4 ಬಾವಚಿತ್ರಗಳನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1) ದಿಃ 26.06.2025 ರಂದು ಮುತ್ತಿನಕೊಪ್ಪ ಗ್ರಾಮದ ಪಜೆರೋ ಹೊಟೇಲ್ ಮುಂಭಾಗದಲ್ಲಿ ದಿಃ 22.06.2025 ರಂದು ಮದ್ಯಾಹ್ನ 3.30 ರ ಸುಮಾರಿಗೆ ಚಾಸಾ 1 ರವರನ್ನು ಪಿಜರೋ ಹೊಟೇಲ್ ಬಳಿ ಆರೋಪಿತರು ತಮ್ಮ ಬುಲೆರೊ ವಾಹನ ತೆಗೆದುಕೊಂಡು ಹೋಗುತ್ತಿರುವಾಗ ಚಾಸಾ 1 ರವರನ್ನು ಸದರಿ ವಾಹನದ ಚಾಲಕನು ಅವರ ಬಲಗೈ ಅನ್ನು ಹಿಡಿದ್ದು ಎಳೆದುಕೊಂಡು ಹೋಗಿದ್ದು, ಸದರಿ ಸ್ಥಳ ಇದೆ ಎಂದು ತೋರಿಸಿದ ಮೇರೆಗೆ ನನ್ನ ಮತ್ತು ಚಾಸಾ 4 ರವರ ಸಮಕ್ಷಮ ಪೋಲಿಸರು ಪಂಚನಾಮೆ ನಿಪಿ-2 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 1 ರವರು ಮದ್ಯಾಹ್ನ 1.45 ಗಂಟೆಯಿಂದ 4.30 ಗಂಟೆಯ ಅವಧಿಯಲ್ಲಿ ಭದ್ರಾವತಿ ಕಾರೆ ಹಳ್ಳಿ ಪ್ಲೈ ಓವರ್ ಬ್ರಿಡ್ಜ್ ಕೆಳಗೆ ಚಾಸಾ 1 ರವರಿಗೆ ಹಲ್ಲೆ ಮಾಡಿದ ಜಾಗಾ ಇದೆ ಎಂದು ಚಾಸಾ 1 ರವರು ತೋರಿಸಿದ ಮೇರೆಗೆ ನಮ್ಮ ಸಮಕ್ಷಮ ನಿಪಿ-2 ರಂತೆ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-

ಸಿಸಿ ನಂಃ **89/2025**
ಸಿ ಡಬ್ಲ್ಯೂಃ **05**/ಪಿ ಡಬ್ಲ್ಯೂ ಃ**07**

2 ರಂತೆ ಮಹಜರ್ ಮಾಡುವ ಕಾಲಕ್ಕೆ ನಿಪಿ-3 ಮತ್ತು ನಿಪಿ-4 ರಂತೆ ಪೋಲಿಸರು ಕೃತ್ಯ ಸ್ಥಳದ ಭಾವಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ- 2 ರಂತೆ ಕೃತ್ಯ ಸ್ಥಳದ ಮಹಜರ್ ಹಾಗೂ ನಿಪಿ-3 ಮತ್ತು ನಿಪಿ-4 ರಂತೆ ಭಾವಚಿತ್ರಗಳನ್ನು ತೆಗೆದಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಉತ್ತರಿಸಿರುತ್ತಾರೆ.

ಮರು ವಿಚಾರಣೆ ಃ ಇಲ್ಲ ಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ